ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821 2420810

ಸಂ:ಕಾಇಂ:ಲೋಇ:ಮೈವಿಮೈ:ಸ ಇಂ–1:ಸುಪ್ರಪ:2023–24:

No 809
06/07/23

ರವರಿಗೆ

ಕಾರ್ಯದರ್ಶಿಗಳು,
ಪೂರ್ಣ ಚೇತನ ಪಬ್ಲಿಕ್ ಶಾಲೆ,
ರಾಯನಕೆರೆ ಪೋಸ್ಟ್,
ಮಾನಂದವಾಡಿ ರಸ್ತೆ,
ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ.

ಮಾನ್ಯರೇ,

ವಿಷಯ: ಮೈಸೂರು ತಾಲ್ಲೂಕು, ರಾಯನಕೆರೆ ಪೋಸ್ಟ್, ಮಾನಂದವಾಡಿ ರಸ್ತೆ ಹತ್ತಿರ ನಿರ್ಮಿಸಿರುವ ಪೂರ್ಣಚೇತನ ಪಬ್ಲಿಕ್ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ
1. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1ನೇ ಉಪವಿಭಾಗ, ಮೈಸೂರು, ಇವರ ಕಛೇರಿ ಪತ್ರ ಸಂಖ್ಯೆ 389 ದಿನಾಂಕ 04.07.2023
2. ಸರ್ಕಾರದ ಪತ್ರ ಸಂಖ್ಯೆ (ಶಿಕ್ಷಣ ಇಲಾಖೆ) ಲೋಇ:59:ಬಿಇಡಿ:2019 ದಿನಾಂಕ 06.05.2022.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರು ತಾಲ್ಲೂಕು, ರಾಯನಕೆರೆ ಪೋಸ್ಟ್, ಮಾನಂದವಾಡಿ ರಸ್ತೆ ಹತ್ತಿರ ನಿರ್ಮಿಸಿರುವ ಪೂರ್ಣಚೇತನ **ಪಬ್ಲಿಕ್ ಶಾಲಾ** ಕಟ್ಟಡವನ್ನು ಕಾರ್ಯಪಾಲಕ ಅಭಿಯಂತರರು, ಲೋಇ., ಮೈಸೂರು ವಿಭಾಗ, ಮೈಸೂರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ಉಪವಿಭಾಗ, ಮೈಸೂರು ರವರು ಪರಿವೀಕ್ಷಣೆ ಮಾಡಿದ್ದು, **ಸಹಾಯಕ ಕಾರ್ಯಪಾಲಕ ಇಂಜನಿಯರ್, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ಉಪವಿಭಾಗ, ಮೈಸೂರು,** ರವರು ISO/IEC National Building Code 2016 Group B (Sub Division B1 and B2) Education Building ರನ್ವಯ NDT test & Structrual Stability Certificate ಹಾಗೂ ತಾಂತ್ರಿಕ ವರದಿಗಳೊಂದಿಗೆ ನಿಗದಿತ ನಮೂನೆಯಲ್ಲಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯನ್ನು ಸ್ಥಳ ಪರಿಶೀಲಿಸಿ ಉಲ್ಲೇಖ (2) ರಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ನಂ.1ನೇ ಉಪವಿಭಾಗ, ಮೈಸೂರು, ರವರು ದೃಢೀಕರಿಸಿರುತ್ತಾರೆ.

ಸದರಿ ಕಟ್ಟಡವನ್ನು ಪರಿಶೀಲಿಸಲಾಗಿ, ಕಟ್ಟಡವು ಜಿ+1 ಹಂತದ ಕಟ್ಟಡವಾಗಿದ್ದು, 2016 ರಲ್ಲಿ ನಿರ್ಮಾಣಗೊಂಡು ಪೂರ್ಣಗೊಂಡಿರುತ್ತದೆ. ಕಟ್ಟಡವು ನೆಲಮಹಡಿ ಹಾಗೂ ಒಂದು ಮಹಡಿಯನ್ನು ಒಳಗೊಂಡಿರುತ್ತದೆ. **ಶ್ರೀ ಪೃಥ್ವಿರಾಜ್, ಎಂ.ವಿ., ಬಿ.ಇ., (ಸಿವಿಲ್), ನಂ. 887, ಮಸೀದಿ ರಸ್ತೆ, ಬೆಲವತ್ತಾ, ಮೈಸೂರು 570 003,** ರವರು ಕಟ್ಟಡವು ಸುರಕ್ಷಿತವಾಗಿರುವ ಬಗ್ಗೆ ಹಾಗೂ ಎಲ್ಲಾ ರೀತಿಯ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ದೃಢೀಕರಿಸಿರುತ್ತಾರೆ. ಕಟ್ಟಡಕ್ಕೆ ಅವಶ್ಯ ಶೌಚಾಲಯಗಳು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ಕಟ್ಟಡದ ಕೆಲವು ಗೋಡೆಗಳಲ್ಲಿ ಎರಡು ಕಡೆ ಕ್ರ್ಯಾಕ್ ಕಂಡುಬಂದಿರುತ್ತದೆ ಮತ್ತು ಅಂಗವೈಕಲ್ಯವನ್ನು ಹೊಂದಿರುವ ಮಕ್ಕಳಿಗೆ ರ್‍ಯಾಂಪ್ ಅನ್ನು ನಿರ್ಮಿಸಿರುವುದಿಲ್ಲ. ಮೇಲೆ ತಿಳಿಸಿರುವಂತೆ ರಿಪೇರಿಗಳನ್ನೊಳಗೊಂಡಂತೆ ಸಣ್ಣ–ಪುಟ್ಟ ಕಿಟಕಿ, ಬಾಗಿಲುಗಳ ರಿಪೇರಿಯನ್ನು ದುರಸ್ಥಿಪಡಿಸಲು ಸ್ಥಳದಲ್ಲಿ ಸೂಚಿಸಲಾಗಿದ್ದು, ಮೇಲ್ಛಾವಣಿಗೆ ವಾಟರ್ ಪ್ರೂಫ್ ಅಳವಡಿಸಲು ಹಾಗೂ ಕಟ್ಟಡಕ್ಕೆ ರ್‍ಯಾಂಪನ್ನು ನಿರ್ಮಿಸಲು ಸೂಚಿಸಲಾಗಿರುತ್ತದೆ. ಇನ್ನುಳಿದಂತೆ ಕಟ್ಟಡವು ಸುರಕ್ಷತವಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

ಮುಂದುವರೆದು, ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.1 ಉಪವಿಭಾಗ, ಮೈಸೂರು ರವರು ಉಲ್ಲೇಖ ಪತ್ರದಲ್ಲಿ ಕಟ್ಟಡದ ಕಾಂಕ್ರೀಟ್ ಸದೃಢತೆಯ ಬಗ್ಗೆ **ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ಉಪವಿಭಾಗ, ಮೈಸೂರು,** ಹಾಗೂ **ಶ್ರೀ ಪೃಥ್ವಿರಾಜ್, ಎಂ.ವಿ., ಬಿ.ಇ., (ಸಿವಿಲ್), ನಂ. 887, ಮಸೀದಿ ರಸ್ತೆ, ಬೆಲವತ್ತಾ, ಮೈಸೂರು 570 003,** ಇವರ Physical observation & Accordingly necessary field Tests ಪರೀಕ್ಷೆಗಳನ್ನು ಕೈಗೊಂಡು, ಸಮಾಲೋಚಕರೊಂದಿಗೆ ಉಪವಿಭಾಗದ ತಾಂತ್ರಿಕ ವರ್ಗವು ನಡೆಸಿರುವ ಪರೀಕ್ಷೆಯ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡುಬಂದಿರುತ್ತದೆ ಎಂದು ವರದಿ ಮಾಡಿರುತ್ತಾರೆ.

- Recognizance, visual inspection of Building-cracks, distress, dampness etc. ಪರೀಕ್ಷೆಯನ್ನು **ಶ್ರೀ ಪೃಥ್ವಿರಾಜ್, ಎಂ.ವಿ., ಬಿ.ಇ., (ಸಿವಿಲ್), ನಂ. 887, ಮಸೀದಿ ರಸ್ತೆ, ಬೆಲವತ್ತಾ, ಮೈಸೂರು 570 003,** ರವರ ಜೊತೆ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡದೊಂದಿಗೆ ಕೈಗೊಳ್ಳಲಾಗಿದ್ದು, ಕಟ್ಟಡವು ಉತ್ತಮ ಗುಣಮಟ್ಟದಿಂದ ಕೂಡಿರುವುದು ಕಂಡುಬಂದಿರುತ್ತದೆ.
- Form for Certificate for Structural Design Sufficiency ಪ್ರಮಾಣ ಪತ್ರವನ್ನು **ಶ್ರೀ ಪೃಥ್ವಿರಾಜ್, ಎಂ.ವಿ., ಬಿ.ಇ., (ಸಿವಿಲ್), ನಂ. 887, ಮಸೀದಿ ರಸ್ತೆ, ಬೆಲವತ್ತಾ, ಮೈಸೂರು 570 003,** ರವರು ನೀಡಿರುತ್ತಾರೆ.

ಸದರಿ ಸಂಸ್ಥೆಯವರು ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ ಲೋಇ:59:ಬಿಇಡಿ:2019 ದಿನಾಂಕ 06.05.2022. ರಂತೆ ಸದರಿ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ಪಡೆಯಲು ನಿಗದಿಪಡಿಸಿರುವ ಶುಲ್ಕವಾದ ರೂ. 1,000.00 ಗಳನ್ನು ಲೆಕ್ಕಶಾಖೆಗೆ ಪಾವತಿಸಿರುತ್ತಾರೆ. ಸದರಿ ಸಂಸ್ಥೆಯವರು ನೀಡಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ **ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಗುಣ ಭರವಸೆ ಉಪವಿಭಾಗ, ಮೈಸೂರು,** ಹಾಗೂ **ಶ್ರೀ ಪೃಥ್ವಿರಾಜ್, ಎಂ.ವಿ., ಬಿ.ಇ., (ಸಿವಿಲ್), ನಂ. 887, ಮಸೀದಿ ರಸ್ತೆ, ಬೆಲವತ್ತಾ, ಮೈಸೂರು 570 003,** ರವರು ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆಯೆಂದು ನೀಡಿರುವ ಪ್ರಮಾಣ ಪತ್ರವನ್ನು ಪರಿಗಣಿಸಿ, ಹಾಗೂ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಂಡ ಪರಿಶೀಲಿಸಲಾಗಿ ಕಟ್ಟಡವು **"Structurally Stable"** ಇರುವುದಾಗಿ ಪರೀಕ್ಷಾ ವರದಿಗಳಿಂದ ಕಂಡುಬಂದಿರುವುದರಿಂದ ಪ್ರಸಕ್ತ ಶೈಕ್ಷಣಿಕ ಸಾಲಿಗೆ (2023–24ನೇ ಸಾಲಿಗೆ) ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು (Building Safety Certificate) ನೀಡಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
ಮೈಸೂರು ವಿಭಾಗ, ಮೈಸೂರು